**ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳವಿಶ್ವವಿದ್ಯಾಲಯ**
**ನಂದಿನಗರ, ಬೀದರ-585226.**

ದೂರವಾಣಿ: ಕಛೇರಿ: 08482–245241
website-www.kvafsu.edu.in
Email:Regkvafsu@gmail.com

**ಕುಲಸಚಿವರ ಕಚೇರಿ**

ಸಂಖ್ಯೆ :ಕುಸ:ಕಪಪಮೀವಿವಿ:ನೇ.ವಿ:ಸ.ಪ್ರಾ:ಗುತ್ತಿಗೆ :2026-27 ದಿನಾಂಕ:13.05.2026

## ಅಧಿಸೂಚನೆ

**ವಿಷಯ:** ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬೀದರ ಇಲ್ಲಿ ಖಾಲಿ ಇರುವ ಬೋಧಕ ವೃಂದದ ವಿವಿಧ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಲು ಅರ್ಜಿಗಳನ್ನುಆಹ್ವಾನಿಸುವ ಕುರಿತು.

ಉಲ್ಲೇಖ: 1. UGC Guideline No:F.25-1/2018(PS/MISC Dated:28.01.2019
2. Karnataka Governor's Secretariat: No.GS 08 MLM 2023 Date:20.05.2025 .
3. Govt. order No: ಸಿಆಸುಇ 262 ಸೇನೆನಿ 2025 ದಿನಾಂಕ:29.01.2026.

** ** **

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ ಇದರ ಅಡಿಯಲ್ಲಿ ಬರುವ ವಿವಿಧ ಅಂಗ ಸಂಸ್ಥೆಗಳಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರು-137, ಸಹ ಪ್ರಾಧ್ಯಾಪಕರು-13 ಮತ್ತು ಪ್ರಾಧ್ಯಾಪಕರು-15 ಒಟ್ಟು 165 ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಆನ್‌ಲೈನ್ ಮುಖಾಂತರ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವ ಬೋಧಕ ಸಿಬ್ಬಂದಿ ರವರಿಗೆ ನೀಡುವ ವೇತನ ಮಾಸಿಕ ರೂ.**50,000/-**ಯನ್ನು ಉಲ್ಲೇಖ (2)ರಲ್ಲಿ ನಿಗಧಿ ಪಡಿಸಿದಂತೆ ನೀಡಲಾಗುವುದು. ಹಾಗೂ Assistant Farm manager ಸಿಬ್ಬಂದಿ ರವರಿಗೆ ನೀಡುವ ವೇತನ ಮಾಸಿಕ ರೂ.35,000/- ನೀಡಲಾಗುವುದು.

ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಸಲ್ಲಿಸಲು ನಿಗಧಿಪಡಿಸಲಾದ ಕೊನೆಯ ದಿನಾಂಕ 30-05-2026 (ಸಾಯಂಕಾಲ 5.00 ಗಂಟೆವರೆಗೆ). ಅರ್ಹ ಅಭ್ಯರ್ಥಿಗಳಿಗೆ ದಿನಾಂಕ 8-06-2026 ರಂದು ಬೆಳಿಗ್ಗೆ 10.00 ಗಂಟೆಗೆ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನ ವಿಶ್ವವಿದ್ಯಾಲಯ ಬೀದರ ಇಲ್ಲಿನ ವ್ಯವಸ್ಥಾಪಕ ಮಂಡಳಿ ಕೊಠಡಿಯಲ್ಲಿ ಸಂದರ್ಶನ ನಡೆಸಲಾಗುವುದು.

1. ಅಭ್ಯರ್ಥಿಗಳು ಅಂತರಜಾಲ ಮುಖಾಂತರ ಅರ್ಜಿಯಲ್ಲಿ ಸಲ್ಲಿಸಿರುವ ಮಾಹಿತಿಯನ್ನು ಪರಿಗಣಿಸಿ ಮತ್ತು ವಿಶ್ವವಿದ್ಯಾಲಯ ನಿಗದಿಪಡಿಸಿದ Score Card ಹಾಗೂ ಸಂದರ್ಶನದಲ್ಲಿ ಪಡೆಯುವ ಅಂಕಗಳ ಆಧಾರದ ಮೇಲೆ ಗುತ್ತಿಗೆ ಆಧಾರದ ಮೇಲೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.
2. ಅಭ್ಯರ್ಥಿಗಳು ದಿನಾಂಕ:20.05.2026 ರಿಂದ 30-05-2026 ರೊಳಗಾಗಿ ಆನ್‌ಲೈನ್ ಮುಖಾಂತರ www.kvafsu.edu.in ನಲ್ಲಿ ಭರ್ತಿ ಮಾಡಿ ಸಲ್ಲಿಸುವುದು.
3. ನಿಗದಿಪಡಿಸಿದ ವಿದ್ಯಾರ್ಹತೆ: ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಂದರೆ ದಿನಾಂಕ: 30.05.2026ರ ಒಳಗಾಗಿ ಅಭ್ಯರ್ಥಿಯು ಭಾರತದಲ್ಲಿ ಕಾನೂನು ರೀತ್ಯ ಸ್ಥಾಪಿಸಲಾದ ಯಾವುದೇ ಪಶುವೈದ್ಯಕೀಯ ವಿಜ್ಞಾನ ವಿಶ್ವವಿದ್ಯಾಲಯ ಅಥವಾ ಕೃಷಿ

ವಿಶ್ವವಿದ್ಯಾಲಯದಿಂದ ಸಂಬಂಧಿತ ವಿಷಯದಲ್ಲಿ ಸ್ನಾತಕೋತ್ತರ ಪದವಿ ಮತ್ತು ಎನ್‌ಇ ಟಿ. ಅಥವಾ ಪಿ ಹೆಚ್.ಡಿ/ ಪದವಿಯನ್ನು ಕಡ್ಡಾಯವಾಗಿ ಪಡೆದಿರಬೇಕು.

4. ಪಶುವೈದ್ಯಕೀಯ ವಿಷಯಕ್ಕೆ ಸಂಬಂಧಿಸಿದ ಅಭ್ಯರ್ಥಿಗಳು ಕರ್ನಾಟಕ ಪಶುವೈದ್ಯಕೀಯ ಪರಿಷತ್ತಿನ ಕಾಯ್ದೆ 1984ರ ಅಡಿಯಲ್ಲಿ ಕೆ.ವಿ.ಸಿ ಕಡ್ಡಾಯವಾಗಿ ನೊಂದಣಿ ಯಾಗಿರಬೇಕು.
5. ದೈಹಿಕ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಎಂ.ಪಿ.ಎಡ್., ಎನ್.ಇ.ಟಿ. ಅಥವಾ ಪಿ.ಹೆಚ್.ಡಿ. /ವಿದ್ಯಾರ್ಹತೆಯನ್ನು ಕಡ್ಡಾಯವಾಗಿ ಪಡೆದಿರಬೇಕು
6. ವಯೋಮಿತಿ: ಅಭ್ಯರ್ಥಿಗಳು ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಅಂತಿಮ ದಿನಾಂಕದಂದು ಕನಿಷ್ಠ ವಯೋಮಿತಿ 18 ವರ್ಷ ಪೂರ್ಣಗೊಂಡಿರಬೇಕು ಹಾಗೂ ನಿಗದಿತ ವರ್ಗವಾರು ಗರಿಷ್ಠ ವಯೋಮಿತಿಯನ್ನು ಮೀರಿರಬಾರದು. ವಯೋಮಿತಿಯನ್ನು ಸರ್ಕಾರದ ಆದೇಶ ಸಂ:ಸಿಆಸುಇ 262 ಸೇನೆನಿ 2025 ದಿನಾಂಕ:29.01.2026ರ ಮೇರೆಗೆ ನಿಗದಿಪಡಿಸಲಾಗಿದೆ.

| **ವರ್ಗಗಳು** | **ಗರಿಷ್ಟ ವಯೋಮಿತಿ** |
|---|---|
| ಸಾಮಾನ್ಯ ವರ್ಗ | 40 ವರ್ಷಗಳು |
| ಪ್ರವರ್ಗ II ಎ, II ಬಿ, III ಎ, III ಬಿ | 43 ವರ್ಷಗಳು |
| ಪ.ಜಾ., ಪ.ಪಂ, ಪ್ರವರ್ಗ-1 | 45 ವರ್ಷಗಳು |
| ನಿವೃತ್ತ ಪ್ರಾಧ್ಯಾಪಕರು | 70 ವರ್ಷಗಳು |

**1.ಜಾತಿ / ಮೀಸಲಾತಿ ಪ್ರಮಾಣ ಪತ್ರಗಳು:**

ಮೀಸಲಾತಿ ಕೋರಬಯಸುವ ಅಭ್ಯರ್ಥಿಗಳು ಈ ಕೆಳಗೆ ನಮೂದಿಸಿರುವ ನಮೂನೆಗಳಲ್ಲಿಯೇ ಮೀಸಲಾತಿ ಪ್ರಮಾಣ ಪತ್ರಗಳನ್ನುಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಂಡಿರತಕ್ಕದ್ದು.

- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು ನಮೂನೆ- ಡಿ
- ಪ್ರವರ್ಗ-1 ಕ್ಕೆಸೇರಿದ ಅಭ್ಯರ್ಥಿಗಳು - ನಮೂನೆ 'ಇ'
- ಪ್ರವರ್ಗ-2ಎ, 2ಬಿ, 3ಎ ಮತ್ತು 3ಬಿ ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು - ನಮೂನೆ 'ಎಫ್'

ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದೊಳಗಾಗಿ ಚಾಲ್ತಿಯಲ್ಲಿರುವ ಮೀಸಲಾತಿ ಪ್ರಮಾಣ ಪತ್ರವನ್ನು ಸಂಬಂಧಿತ ತಹಸೀಲ್ದಾರ್‌ರವರಿಂದ ಪಡೆದಿಟ್ಟುಕೊಂಡು ಅದೇ ಪ್ರಮಾಣ ಪತ್ರವನ್ನು ಮೂಲ ದಾಖಲಾತಿಗಳ ಪರಿಶೀಲನೆ ಸಮಯದಲ್ಲಿ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಿ ಅವರ ಅಭ್ಯರ್ಥಿತನವನ್ನು ಅರ್ಹರಾದಲ್ಲಿ ಮಾತ್ರ ಸಾಮಾನ್ಯ ಅರ್ಹತೆಯಡಿಯಲ್ಲಿ ಪರಿಗಣಿಸಲಾಗುವುದು.

**2.** ಗ್ರಾಮೀಣ ಅಭ್ಯರ್ಥಿಗಳಿಂದ ಮೀಸಲಾತಿ ಬಯಸುವವರು ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ:08:ಸೆನೆನಿ:2001 ದಿನಾಂಕ:13-02-2001ರಲ್ಲಿ ನಿಗದಿಪಡಿಸಿದ ನಮೂನೆ-1 ಮತ್ತು ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ/96/ಸೇನೇನಿ/2005 ದಿ:10-08-2005ರಲ್ಲಿ ನಿಗಧಿಪಡಿಸಲಾದ ನಮೂನೆ-2ರಲ್ಲಿ ಅಭ್ಯರ್ಥಿಗಳು ಉತ್ತೀರ್ಣರಾದ ಸಂಸ್ಥೆಯ ಪ್ರಾಂಶುಪಾಲರು/ ಮುಖ್ಯೋಪಾಧ್ಯಾಯರು/ಮುಖ್ಯೋಪಾಧ್ಯಾಯಿನಿಯರಿಂದ ಕ್ಷೇತ್ರ ಶಿಕ್ಷಣಾಧಿಕಾರಿಯ ಮೇಲು ಸಹಿಯೊಂದಿಗೆ ಪಡೆಯಬೇಕು. ಈ ಪ್ರಮಾಣ ಪತ್ರವನ್ನು ಅಭ್ಯರ್ಥಿಗಳು ಅಂತಿಮವಾಗಿ ವ್ಯಾಸಂಗ ಮಾಡಿದ ಸಂಸ್ಥೆ / ಶಾಲೆಗಳಲ್ಲಿ ಅಭ್ಯಾಸ ಮಾಡಿದ್ದಲ್ಲಿ ಈ ಬಗ್ಗೆ ಆ ಎಲ್ಲಾ ಸಂಸ್ಥೆಗಳಲ್ಲಿ ತಪಾಸಣೆ ಆಗಿರಬೇಕು. ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯ ಅಧಿಸೂಚನೆ ಸಂಖ್ಯೆ:ಸಂವ್ಯಶಾಇ: 59:ಶಾಸನ:2000, 06-01-2010 ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳಿಗಾಗಿ (ರಾಜ್ಯ ಸಿವಿಲ್ ಸೇವೆಗಳಲ್ಲಿ) ನೇಮಕಾತಿಗಳ ಅಥವಾ ಹುದ್ದೆಗಳ ಮೀಸಲಾತಿಗಾಗಿ ವಿಧೇಯಕ 2000ದಡಿ ಅವಕಾಶ ಕಲ್ಪಿಸಿ, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ

ಸರ್ಕಾರವು ದಿನಾಂಕ:13-02-2001ರಲ್ಲಿ ಜಾರಿಗೊಳಿಸಲಾದ ಆದೇಶ ಸಂಖ್ಯೆ: ಸಿಆಸುಇ:08:ಸೆನೆನಿ:2001 ನಿಯಮಗಳ ಕಂಡಿಕೆ 3, 4 ಹಾಗೂ 5(1) ರಿಂದ (3)ರನ್ನು ಈ ಕೆಳಗೆ ಉದ್ಧರಿಸಿದೆ.
ಸದರಿ ಅಧಿನಿಯಮದಲ್ಲಿ ಗ್ರಾಮೀಣ ಅಭ್ಯರ್ಥಿಯನ್ನು ಈ ಕೆಳಗೆ ಉದ್ಧರಿಸಿದಂತೆ ಪರಿಭಾಷಿಸಲಾಗಿದೆ.
ಗ್ರಾಮೀಣ ಅಭ್ಯರ್ಥಿ ಎಂದರೆ ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಗ್ರಾಮೀಣ ಪ್ರದೇಶದಲ್ಲಿ ವ್ಯಾಸಂಗ ಮಾಡಿರಬೇಕು.
ಈ ಹಿನ್ನೆಲೆಯಲ್ಲಿ ಮೇಲೆ ವಿವರಿಸಿದ ಅಂಶಗಳನ್ನುಒಳಗೊಂಡ, ಅಂದರೆ (1) ವ್ಯಾಸಂಗ (Study) (2) ಮೀಸಲಾತಿಯ ವರ್ಗ ಮತ್ತು (3) ಮೇಲುಸ್ತರದ ಪರಿಕಲ್ಪನೆ (Creamy Layer Concept) ಈ ಅಂಶಗಳನ್ನು ಒಳಗೊಂಡ ಪ್ರಮಾಣ ಪತ್ರವನ್ನು ಯಾರು ನೀಡಬೇಕು ಎಂಬ ಬಗ್ಗೆ ಸರ್ಕಾರ ಪರಿಶೀಲಿಸಿ ಈ ಕೆಳಕಂಡತೆ ಆದೇಶಿಸಿದೆ.

ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳಿಗಾಗಿ (ರಾಜ್ಯ ಸಿವಿಲ್ ಸೇವೆಗಳಲ್ಲಿ) ನೇಮಕಾತಿಗಳ ಅಥವಾ ಹುದ್ದೆಗಳ ಮೀಸಲಾತಿ ಅಧಿನಿಯಮ, 2000ರ ಸೆಕ್ಷನ್ 5 ರಿಂದ ಈ ಕೆಳಕಂಡ ಕಾರ್ಯ ವಿಧಾನವನ್ನುನಿಗಧಿಪಡಿಸಿದೆ.ಸಂಬಂಧಿಸಿದ ಅಭ್ಯರ್ಥಿಯು ಯಾವ ಇತರೆ ಹಿಂದುಳಿದ ವರ್ಗಕ್ಕೆ (Other Backward Class) ಸೇರಿದ್ದಾನೆ (ಅದರಲ್ಲಿ ಅವನು ಮೇಲುಸ್ತರದ ಪರಿಕಲ್ಪನೆಯಡಿಯಲ್ಲಿ (Creamy Layer Concept) ಬರುವುದಿಲ್ಲವೆನ್ನುವುದು ಒಳಗೊಂಡಿರುತ್ತದೆ) ಎನ್ನುವ ಬಗ್ಗೆಸರ್ಕಾರ (ಅಂದರೆ ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿನ ಸಮಾಜ ಕಲ್ಯಾಣ ಇಲಾಖೆ) ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿಗಳು ಮುಂತಾದವುಗಳ ಮೀಸಲಾತಿ) ಅಧಿನಿಯಮ, 1990 ರಡಿಯಲ್ಲಿ ನಿಗಧಿಪಡಿಸಿದ ಕಾರ್ಯ ವಿಧಾನದ ಪ್ರಕಾರ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು. (ಇತರೆ ಹಿಂದುಳಿದ ವರ್ಗಕ್ಕೆ ಸೇರಿದ ಪ್ರವರ್ಗ-1 ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಸೇರಿದ ಅಭ್ಯರ್ಥಿಗಳಿಗೆ ಮೇಲುಸ್ತರದ ಪರಿಕಲ್ಪನೆ (Creamy Layer Concept) ಅನ್ವಯವಾಗುವುದಿಲ್ಲ). ಅಂದರೆ ಜನರಲ್ ಮೆರಿಟ್ ಸೇರಿದಂತೆ ಹಿಂದುಳಿದ ವರ್ಗಗಳಾದ ಪ್ರವರ್ಗ-2ಎ, ಪ್ರವರ್ಗ-2ಬಿ, ಪ್ರವರ್ಗ-3ಎ, ಮತ್ತು ಪ್ರವರ್ಗ-3ಬಿ ಅಭ್ಯರ್ಥಿಗಳಿಗೆ ಮೇಲುಸ್ತರದ ಪರಿಕಲ್ಪನೆ ಅನ್ವಯವಾಗುತ್ತದೆ.

ಜನರಲ್ ಮೆರಿಟ್ ವರ್ಗಕ್ಕೆ ಸೇರಿದ ಅಂದರೆ ಮೇಲುಸ್ತರದ ಪರಿಕಲ್ಪನೆಯ ವ್ಯಾಪ್ತಿಯಲ್ಲಿ ಬಾರದ ಗ್ರಾಮೀಣ ಅಭ್ಯರ್ಥಿಗಳು ಪ್ರಮಾಣ ಪತ್ರವನ್ನು ಸಂಬಂಧಿಸಿದ ತಹಸೀಲ್ದಾರ್ ಅವರಿಂದ ಪಡೆಯತಕ್ಕದ್ದು.

ಸರ್ಕಾರಿ ಅಧಿಸೂಚನೆ ಸಂಖ್ಯೆ: ಸಿಆಸುಇ:71:ಸೆನೆನಿ:2001 ದಿನಾಂಕ:24-10-2002 ರನ್ವಯ ಶೇಕಡಾ 5% ರಷ್ಟು ಹುದ್ದೆಗಳನ್ನು ಒಂದನೇ ತರಗತಿಯಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಓದಿರುವ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.

**3**. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 149 ಎಸ್‌ಆರ್‌ಆರ್ 2020 ದಿನಾಂಕ: 25-09-2020 ರಲ್ಲಿರಾಜ್ಯ ಸಿವಿಲ್ ಸೇವೆಗಳ ನೇರ ನೇಮಕಾತಿಗಳಲ್ಲಿ ವಿಕಲಚೇತನರಿಗೆ ಕಲ್ಪಿಸಿರುವ ಸಮೂಹ- ಎ" ಮತ್ತು ಬಿ " ಗುಂಪಿನ ಹುದ್ದೆಗಳಿಗೆ ಶೇಕಡ 4 ರಷ್ಟು ಮೀಸಲಾತಿ ಕಲ್ಪಿಸಿದ್ದು, ಇದರನ್ವಯ ಶೇಕಡ 40 ಕ್ಕಿಂತ ಕಡಿಮೆ ಇಲ್ಲದಂತಹ ವಿಶೇಷಚೇತನವುಳ್ಳ ಅಭ್ಯರ್ಥಿಗಳು ಮಾತ್ರ ಈ ಮೀಸಲಾತಿಯನ್ನು ಕೋರಲು ಅರ್ಹರು. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಸಿ.ಆ.ಸು.ಇ:115: ಶೆನೆನಿ:2005 ದಿನಾಂಕ:19-11-2005ರಲ್ಲಿ ನಿಗದಿಪಡಿಸಿರುವ ನಮೂನೆಯಲ್ಲಿ ವಿಶೇಷಚೇತನದ ಬಗ್ಗೆ ಜಿಲ್ಲಾಮಟ್ಟದ ವೈದ್ಯಕೀಯ ಮಂಡಳಿಯಿಂದ ಪ್ರಮಾಣ ಪತ್ರವನ್ನು ಪಡೆದಿಟ್ಟುಕೊಂಡಿರತಕ್ಕದ್ದು. ಮೂಲ ದಾಖಲಾತಿ ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ, ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಲಾಗುವುದು. ಇತರೆ ಯಾವುದೇ ನಮೂನೆಯಲ್ಲಿ ವಿಶೇಷಚೇತನರ ಬಗ್ಗೆ ಪಡೆಯಲಾಗಿರುವ ಪ್ರಮಾಣ ಪತ್ರಗಳನ್ನು/ಗುರುತಿನ ಚೀಟಿಯ ಪ್ರತಿಗಳನ್ನು ಪರಿಗಣಿಸಲು ಬರುವುದಿಲ್ಲ. ಈ ಪ್ರಮಾಣ ಪತ್ರ ಜಾರಿ ಮಾಡಿದ ದಿನಾಂಕವನ್ನು ತಪ್ಪದೇ ಅರ್ಜಿಯಲ್ಲಿ ಸಂಬಂಧಪಟ್ಟ ಅಂಕಣದಲ್ಲಿ ನಮೂದಿಸತಕ್ಕದ್ದು.

**4.** ಮಾಜಿ ಸೈನಿಕರಾಗಿ ಸೇವೆ ಸಲ್ಲಿಸಿದ ಬಗ್ಗೆ ಸರ್ಕಾರವು ನಿಗದಿಪಡಿಸಿದಂತೆ ಪ್ರಮಾಣ ಪತ್ರ ಸಲ್ಲಿಸತಕ್ಕಸದ್ದು.

**5.** ಕನ್ನಡ ಮಾಧ್ಯಮ ಅಭ್ಯರ್ಥಿಗಳು ಸರ್ಕಾರವು ನಿಗಧಿಪಡಿಸಿದಂತೆ ಕನ್ನಡ ಮಾಧ್ಯಮದ ಪ್ರಮಾಣ ಪತ್ರುವನ್ನು ಸಲ್ಲಿಸಬೇಕು .

**6.** ಈ ಅಧಿಸೂಚನೆಯನ್ವಯ ಆಯ್ಕೆಯಾಗುವ ಅಭ್ಯರ್ಥಿಗಳು ರಾಜ್ಯದ್ಯಾದಂತ ಗುರುತಿಸಿದ ಹುದ್ದೆಗಳಲ್ಲಿ ಮಾತ್ರ ಸೇವೆ ಸಲ್ಲಿಸಲು ಬದ್ಧರಾಗಿ ತಕ್ಕದ್ದು.

7. ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಹೊಂದಿದ ಅಭ್ಯರ್ಥಿಗಳ ಸೇವೆಯನ್ನು ಗರಿಷ್ಟ 11 ತಿಂಗಳವರೆಗೆ ಪಡೆಯಲಾಗುವುದು.

8. ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳಿಗೆಯಾವುದೇ TA/DA ನೀಡುವುದಕ್ಕೆ ಅವಕಾಶವಿರುವುದಿಲ್ಲ. ಖುದ್ದಾಗಿ ಸ್ವಂತ ಖರ್ಚಿನಲ್ಲಿ ಸಂದರ್ಶನಕ್ಕೆ ಹಾಜರಾಗುವುದು.

**ಗುತ್ತಿಗೆ ಆಧಾರದ ನೇಮಕಾತಿಯ ಷರತ್ತು ಹಾಗೂ ನಿಬಂಧನೆಗಳು:**

1. ಗುತ್ತಿಗೆ ಆಧಾರದ ನೇಮಕಾತಿಯು ಸಂಪೂರ್ಣವಾಗಿ ತಾತ್ಕಾಲಿಕವಾಗಿದ್ದು, ಯಾವುದೇ ಸಂದರ್ಭದಲ್ಲಿ ಖಾಯಂಗೊಳಿಸಲು ಅವಕಾಶವಿರುವುದಿಲ್ಲ.
2. ಗುತ್ತಿಗೆ ಆಧಾರದ ಮೇಲೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕಡ್ಡಾಯವಾಗಿ ಕರ್ನಾಟಕದಲ್ಲಿ ವಾಸವಾಗಿರಬೇಕು.
3. ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವ ಸಹಾಯಕ ಪ್ರಾಧ್ಯಾಪಕ, ಸಹ ಪ್ರಾಧ್ಯಾಪಕ ಮತ್ತು ಪ್ರಾಧ್ಯಾಪಕರು ನಿಗದಿಪಡಿಸಿರುವ ಮಾಸಿಕ ವೇತನವನ್ನು ಹೊರತುಪಡಿಸಿ ಇತರೆ ಯಾವುದೇ ಭತ್ಯೆಗಳನ್ನು ನೀಡಲಾಗುವುದಿಲ್ಲ.
4. ಗುತ್ತಿಗೆ ಮೇರೆಗೆ ಆಯ್ಕೆಯಾಗುವ ಸಹಾಯಕ ಪ್ರಾಧ್ಯಾಪಕರಿಗೆ ಸ್ಥಳ ನಿಯುಕ್ತಿಗೊಳಿಸುವ ಸ್ಥಳದಲ್ಲಿಯೇ ಕಡ್ಡಾಯವಾಗಿ ಕರ್ತವ್ಯ ನಿರ್ವಹಿಸತಕ್ಕದ್ದು.
5. ಗುತ್ತಿಗೆ ಮೇರೆಗೆ ನೇಮಕವಾದ ಅಭ್ಯರ್ಥಿಯು ಮಧ್ಯದಲ್ಲಿ ಸೇವೆಯನ್ನು ತ್ಯಜಿಸಲು ಇಚ್ಚಿಸಿದಲ್ಲಿ ಒಂದು ತಿಂಗಳ ಮುಂಚಿತವಾಗಿ ಮೇಲಾಧಿಕಾರಿಗಳ ಮುಖಾಂತರ ವಿಶ್ವವಿದ್ಯಾಲಯಕ್ಕೆ ಮನವಿಸಲ್ಲಿಸುವುದು.
6. ಗುತ್ತಿಗೆ ಮೇರೆಗೆ ನೇಮಕವಾದ ಅಭ್ಯರ್ಥಿಯು ಯಾವುದೇ ಮಾಹಿತಿ ನೀಡದೇ ಕರ್ತವ್ಯಕ್ಕೆ ಗೈರುಹಾಜರಾದಲ್ಲಿ ಕನಿಷ್ಟ ಒಂದು ತಿಂಗಳ ವೇತನವನ್ನು ವಿಶ್ವವಿದ್ಯಾಲಯಕ್ಕೆ ಹಿಂದಿರುಗಿಸತಕ್ಕದ್ದು.
7. ಸಕ್ಷಮ ಪ್ರಾಧಿಕಾರದ ಅನುಮತಿ ಪಡೆಯದೆ ವೈದ್ಯಕೀಯ ಕಾರಣಗಳ ಮೇರೆಗಾಗಲಿ ಅಥವಾ ಬೇರೆ ಕಾರಣಗಳಿಂದಾಗಲೀ ಅನಧಿಕೃತ ಗೈರು ಹಾಜರಿಯಾದಲ್ಲಿ ಇವರುಗಳ ಗುತ್ತಿಗೆ ಆಧಾರದ ನೇಮಕಾತಿ ಸೇವೆಯನ್ನು ರದ್ದುಗೊಳಿಸಲಾಗುವುದು
8. ಗುತ್ತಿಗೆ ಆಧಾರದ ಮೇರೆಗೆ ಆಯ್ಕೆಯಾದ ಸದರಿ ಭೊದಕ ಸಿಬ್ಬಂದಿರವರ ದುರ್ನಡತೆ, ನಿರ್ಲಕ್ಷತೆಯಿಂದ ವಿಶ್ವವಿದ್ಯಾಲಯಕ್ಕೆ ಸಂಭವಿಸಬಹುದಾದ ಎಲ್ಲಾ ನಷ್ಟಗಳನ್ನು ವಿಶ್ವವಿದ್ಯಾಲಯಕ್ಕೆ ಸದರಿ ಭೊದಕ ಸಿಬ್ಬಂದಿರವರು ಭರಿಸಬೇಕಾಗಿರುತ್ತದೆ.
9. ಗುತ್ತಿಗೆ ಆಧಾರಿತ ಭೊದಕ ಸಿಬ್ಬಂದಿರವರು ತಮ್ಮ ಕರ್ತವ್ಯವನ್ನು ಪಾಲಿಸುತ್ತಿರುವಾಗ ಅಥವಾ ನೆರವೇರಿಸುತ್ತಿರುವಾಗ ಲಭ್ಯವಾಗಬಹುದಾದ ಅಥವಾ ದೊರಕಬಹುದಾದ ಅಧಿಕೃತ ಮಾಹಿತಿಯನ್ನು ಗೌಪ್ಯವಾಗಿಟ್ಟು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
10. ಗುತ್ತಿಗೆ ಆಧಾರದ ಮೇಲೆ ಆಯ್ಕೆ ಹೊಂದಿರುವ ಭೊದಕ ಸಿಬ್ಬಂದಿರವರು ರೂ 100/- ಛಾಪಾ ಕಾಗದದ ನಿಗದಿತ ನಮೂನೆಯ ಮುಚ್ಚಳಿಕೆ ಪತ್ರ ಸಂಭಂದಿತ ಅಧಿಕಾರಿರವರಿಗೆ ಸಲ್ಲಿಸತಕ್ಕದ್ದು.

## ವಿಷಯವಾರು ಹುದ್ದೆಗಳ ವಿವರ:

| Assistant Professor<br>ಸಹಾಯಕ ಪ್ರಾಧ್ಯಾಪಕರು | | |
|---|---|---|
| **Sl. No** | **Name of the Subject** | **No. of Posts** |
| 1 | Veterinary Anatomy & Histology | 08 |
| 2 | Veterinary Pharmacology & Toxicology | 04 |
| 3 | Veterinary Physiology & Bio Chemistry | 04 |
| 4 | Animal Nutrition | 05 |
| 5 | Veterinary Parasitology | 04 |
| 6 | Animal genetics & Breeding | 04 |
| 7 | Livestock Production & Management | 07 |
| 8 | Livestock Farm complex (VGO-02,LPM-04,AGB 02,Poultry Science-02) | 10 |
| 9 | Veterinary Clinical Complex (VSR-01,VMD-03,VGO-03,VPP-02) | 12 |
| 10 | Veterinary Pathology | 04 |
| 11 | Veterinary Microbiology | 03 |
| 12 | Veterinary Public Health & Epidemiology | 04 |
| 13 | Livestock Products Technology | 06 |
| 14 | Veterinary Animal Husbandry Extension Education | 04 |
| 15 | Veterinary Gynecology & Obstetrics | 06 |
| 16 | Veterinary Surgery & Radiology | 09 |
| 17 | Veterinary Medicine | 05 |
| 18 | Dairy Chemistry | 04 |
| 19 | Dairy Microbiology | 02 |
| 20 | Dairy Business Management | 02 |
| 21 | Dairy Technology | 05 |
| 22 | Dairy Engineering | 06 |
| 23 | Aquaculture | 02 |
| 24 | Fisheries Resource Management | 03 |
| 25 | Fisheries Economics, Statistics and Extension | 03 |
| 26 | Fish Processing Technology | 02 |
| 27 | Agronomy | 02 |
| 28 | Assistant Farm Manager (BVSc & AH-01) (BSc -Agri 01) | 02 |
| 29 | Physical Education | 05 |
| **Total** | | **137** |

| SL. No | Associate professor<br>ಸಹ ಪ್ರಾಧ್ಯಾಪಕರು<br>Name of the Subject | No. of Posts |
|---|---|---|
| 1 | Veterinary Anatomy & Histology | 01 |
| 2 | Veterinary Physiology & Bio Chemistry | 01 |
| 3 | Animal Nutrition | 01 |
| 4 | Veterinary Pathology | 01 |
| 5 | Animal genetics& Breeding | 01 |
| 6 | Dairy Microbiology | 01 |
| 7 | Veterinary Pharmacology & Toxicology | 01 |
| 8 | Veterinary Public Health & Epidemiology | 01 |
| 9 | Veterinary Parasitology | 01 |
| 10 | Livestock Products Technology | 01 |
| 11 | Veterinary Surgery & Radiology | 01 |
| 12 | Veterinary Medicine | 01 |
| 13 | Evening Clinic (VGO/ VMD/VSR) | 01 |
| | **Total** | **13** |

| SL. No | Professor Post<br>ಪ್ರಾಧ್ಯಾಪಕರು<br>Name of the Subject | No. of Posts |
|---|---|---|
| 1 | Veterinary Physiology & Bio Chemistry | 01 |
| 2 | Livestock Production Management | 01 |
| 3 | Veterinary Clinical Complex (VMD/VSR/VGO) | 01 |
| 4 | Livestock Farm complex (LPM) | 01 |
| 5 | Animal Nutrition | 01 |
| 6 | Veterinary Pathology | 01 |
| 7 | Animal Genetics& Breeding | 01 |
| 8 | Veterinary Pharmacology & Toxicology | 01 |
| 9 | Veterinary Public Health & Epidemiology | 01 |
| 10 | Veterinary Parasitology | 01 |
| 11 | Livestock Products Technology | 01 |
| 12 | Veterinary Animal Husbandry Extension Education | 01 |
| 13 | Veterinary Surgery & Radiology | 01 |
| 14 | Veterinary Medicine | 01 |
| 15 | Evening Clinic (VGO/VMD/VSR) | 01 |
| | **Total** | **15** |

ಮೇಲ್ಕಾಣಿಸಿದ ಸಹಾಯಕ ಪ್ರಾಧ್ಯಾಪಕ-137, ಸಹ ಪ್ರಾಧ್ಯಾಪಕ-13 ಮತ್ತು ಪ್ರಾಧ್ಯಾಪಕರ-15 ಒಟ್ಟು 165 ಹುದ್ದೆಗಳಿಗೆ ಮೀಸಲಾತಿ ವರ್ಗೀಕರಣ ಸರ್ಕಾರದ ಆದೇಶಗಳಂತೆ ಮತ್ತು ಆಯ್ಕೆ ಪ್ರಕ್ರಿಯ ಸರ್ಕಾರದ ಆದೇಶ ದಿನಾಂಕ: 11.03.2011 ರಂತೆ Inter Se merit ಆಧಾರದಲ್ಲಿ ICAR/UGC/VCI ನಿಗದಿಪಡಿಸಿದ ವಿದ್ಯಾರ್ಹತೆಯ (Qualification), ವಿಶ್ವವಿದ್ಯಾಲಯದ ಅಧಿನಿಯಮ

2004, ಪರಿನಿಯಮ 2009 ಅನುಸರಿಸಿ ತಾತ್ಕಾಲಿಕವಾಗಿ ಅಭ್ಯರ್ಥಿಗಳನ್ನು 11 ತಿಂಗಳ ಅವಧಿಗೆ ನೇಮಕ ಮಾಡಿಕೊಳ್ಳಲಾಗುವುದು.

"ಮಾನ್ಯ ಕುಲಪತಿಗಳಿಂದ ಅನುಮೋಧಿಸಲ್ಪಟ್ಟಿದೆ"

ಕುಲಸಚಿವರು

ಕುಲಸಚಿವರು
ಕರ್ನಾಟಕ ಪಶುವೈದ್ಯಕೀಯ ಮತ್ತು
ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ
ನಂದಿನಗರ, ಬೀದರ